

ಗೀತಾ ವಸಂತ

ಚಿತ್ರಗಳು: ಗೋವಿಂದರಾಜ ಜವಳಿ

# ಹೆಣ್ಣಿನ ಚಿಂತನೆ ಬದಲಾಗಿದೆ; ಸಮಾಜದ ಚಿಂತನೆ ಬದಲಾಗಿಲ್ಲ...

ನವ್ಯ ಸಾಹಿತ್ಯದ ಆರಂಭಿಕ ಕಾಲದಲ್ಲಿ ಬರವಣಿಗೆಯನ್ನು ಆರಂಭಿಸಿದ ವೀಣಾ ಶಾಂತೇಶ್ವರ ಸ್ತ್ರೀವಾದಿ ಆಲೋಚನೆಗಳನ್ನು ತಮ್ಮ ಕಥೆ- ಕಾದಂಬರಿಗಳ ಮೂಲಕ ಪ್ರಸ್ತುತಪಡಿಸಿದವರು. ತಾವು ನಂಬಿದ ಮೌಲ್ಯಗಳನ್ನು ಬದುಕಿನಲ್ಲಿಯೂ ಬರಹದಲ್ಲಿಯೂ ಪ್ರತಿಪಾದಿಸಿದವರು. ಧಾರವಾಡದ ಕರ್ನಾಟಕ ಕಲಾ ಕಾಲೇಜಿನ ವಿದ್ಯಾರ್ಥಿನಿಯಾಗಿ, ಅದೇ ಕಾಲೇಜಿನಲ್ಲಿ ಇಂಗ್ಲಿಷ್ ಪ್ರಾಧ್ಯಾಪಕಿಯಾಗಿ ನಂತರ ಪ್ರಾಂಶುಪಾಲರಾಗಿ ಅನೇಕ ಸುಧಾರಣಾ ಕ್ರಮಗಳನ್ನು ಕೈಗೊಂಡು ಕಾಲೇಜಿನ ಕೀರ್ತಿ ಮರುಸ್ಥಾಪಿಸಲು ಶ್ರಮಿಸಿದ ಹೆಗ್ಗಳಿಕೆ ಅವರದ್ದು. ಲೇಖಕಿಯಾಗಿ, ಸಂಘಟಕಿಯಾಗಿ, ಆಡಳಿತದ ಚುಕ್ಕಾಣಿ ಹಿಡಿದ ಅನುಭವಿಯಾಗಿ ಪರಿಚಿತರು.

ಬಾಗಲಕೋಟೆಯಲ್ಲಿ 1945ರ ಫೆ. 22ರಂದು ಜನಿಸಿದ ಅವರು, ಎಂ.ಎ, ಎಂ.ಲಿಟ್, ಪಿಎಚ್.ಡಿ ಪದವಿಯೊಂದಿಗೆ ಹಿಂದಿ ಮತ್ತು ಫ್ರೆಂಚ್ ಭಾಷೆಯನ್ನು ಕಲಿತರು. ನಂತರ ಧಾರವಾಡದಲ್ಲಿಯೇ ನೆಲೆಯೂರಿ ಸಾಹಿತ್ಯಕೃಷಿ ಮುಂದುವರಿಸಿದರು. ‘ಮುಳ್ಳುಗಳು’, ‘ಹಸಿವು’, ‘ಕವಲು’, ‘ಕೊನೆಯದಾರಿ’ (ಕಥಾಸಂಕಲನಗಳು); ‘ಗಂಡಸರು’, ‘ಶೋಷಣೆ, ಬಂಡಾಯ ಇತ್ಯಾದಿ’ (ಕಾದಂಬರಿಗಳು); ‘ಸಂಚಿ ಹೊನ್ನಮ್ಮ’, ‘ಕನ್ನಡದ ಸಣ್ಣಕಥಾ ಸಾಹಿತ್ಯಕ್ಕೆ ಮಹಿಳೆಯರ ಕೊಡುಗೆ’ (ವಿಮರ್ಶೆ); ‘ಮಹಿಳೆಯರ ಸಣ್ಣ ಕತೆಗಳು’ (ಸಂಪಾದಿತ), ‘ಅಭಿವ್ಯಕ್ತಿ’ (ಸ್ತ್ರೀವಾದಿ ಸಾಹಿತ್ಯದ ಬಗ್ಗೆ ವಿವಿಧ ಲೇಖನಗಳು) ಅವರ ಪ್ರಮುಖ ಕೃತಿಗಳು. ಮರಾಠಿಯಿಂದ ಕನ್ನಡಕ್ಕೆ ಕೆಲವು ಕೃತಿಗಳನ್ನು ಅನುವಾದಿಸಿದ್ದಾರೆ. ಇಂಗ್ಲಿಷ್‌ನಲ್ಲಿಯೂ ಕಥೆ-ಕಾದಂಬರಿಗಳನ್ನು ಬರೆದು ಪ್ರಕಟಿಸಿದ್ದಾರೆ. ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಗೌರವ ಪುರಸ್ಕಾರ, ದಾನ ಚಿಂತಾಮಣಿ ಅತ್ತಿಮಬ್ಬೆ ಪುರಸ್ಕಾರ ಸೇರಿದಂತೆ ಹಲವು ಗೌರವ-ಪುರಸ್ಕಾರಗಳು ಅವರಿಗೆ ಸಂದಿವೆ. ಬದುಕಿನ ಸಂದಿಗ್ಧತೆಗಳನ್ನು ಎದುರಿಸುವ ಜೀವನ್ಮುಖಿ ಧೋರಣೆಯೊಂದಿಗೆ ಸಾಹಿತ್ಯಲೋಕದಲ್ಲಿ ದೀರ್ಘಕಾಲ ಹೆಜ್ಜೆಹಾಕಿದ ವೀಣಾ ಶಾಂತೇಶ್ವರ ಅವರೊಡನೆ ‘ಮಯೂರ’ಕ್ಕಾಗಿ ನಡೆಸಿದ ವಿಶೇಷ ಸಂದರ್ಶನ ಇಲ್ಲಿದೆ.

